CC No. 454/2022

DW-1

ದಿನಾಂಕಃ 29-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ದೂರುದಾರರ ಪರ ಶ್ರೀ. ಬಿ ಎ ಬಿ ವಕೀಲರಿಂದ.**

ದೂರುದಾರರ ಚಿಕ್ಕಪ್ಪ ಮಂಜುನಾಥ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳುತ್ತಿದ್ದು ಅವರು ಯಾವ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ಸದರಿ ಮಂಜುನಾಥ ಇವರನ್ನು ನಾನು ನೋಡಿಲ್ಲ. ದೂರುದಾರರು ಬಹಳ ಜನರಿಗೆ ಹಣದ ನಿಮಿತ್ತ ತೊಂದರೆ ಕೊಡುತ್ತಿದ್ದರು ಎಂಬುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರು ನನಗೆ ಬಹಳ ವರ್ಷಗಳಿಂದ ಪರಿಚಯಸ್ಥರು ಇರುತ್ತಾರೆ. ಆ ಪರಿಚಯದ ನಿಮಿತ್ತ ನಾನು ದೂರುದಾರರಿಂದ ಆಗಾಗ ಹಣ ತೆಗೆದುಕೊಳ್ಳುವುದು ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಈ ಹಿಂದೆ ನಾನು ಸಿಂಡಿಕೇಟ್ ಬ್ಯಾಂಕಿನಲ್ಲಿ ನನ್ನ ಉಳಿತಾಯ ಖಾತೆ ಹೊಂದಿದ್ದೆ ಎಂದರೆ ಸರಿಯಲ್ಲ. ಸಿಂಡಿಕೇಟ್ ಬ್ಯಾಂಕಿನಲ್ಲಿ ನನ್ನದು ಖಾತೆ ಸಂಖ್ಯೆ 12732200045414 ಇತ್ತು ಎಂದರೆ ಸರಿಯಲ್ಲ.

2. ದೂರುದಾರರದು ಹುಬ್ಬಳ್ಳಿಯಲ್ಲಿ ಅಂಗಡಿ ಇತ್ತು ಎಂದು ಹೇಳುತ್ತಿದ್ದು, ಅದರ ಹೆಸರು ಹೇಳಲು ಬರುವುದಿಲ್ಲ. ಆ ಅಂಗಡಿಯಲ್ಲಿ ನಾನು ಕಾಟಾ ಹಾಕುವ ಕೆಲಸ ಮಾಡುತ್ತಿದ್ದೆನು. ನಾನು ಆ ಅಂಗಡಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆನು. ಹಾಗೇ ನಾನು ಕೂಲಿ ಕೆಲಸ ಮಾಡುತ್ತಿದ್ದರಿಂದ ಮಾಲೀಕರು ಹೇಳಿದ ಕೆಲಸ ಮಾತ್ರ ಮಾಡಬೇಕಾಗುತ್ತದೆ ಎಂದರೆ ಸರಿ. ನಾನು ದೂರುದಾರರಿಗೆ ಕಾಳು ಕಡಿ ಕೊಡಿಸುವ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಾಗೇ ಕಾಳು ಕಡಿ ಕೊಡಿಸಿದ ಬಗ್ಗೆ ನಾನು ರಶೀದಿ ಹಾಜರುಪಡಿಸಿಲ್ಲ. ದೂರುದಾರರದು ಹುಬ್ಬಳ್ಳಿಯಲ್ಲಿ ಯಾವುದೇ ಅಂಗಡಿ ಇರಲಿಲ್ಲ ಎಂದರೆ ಸರಿಯಲ್ಲ. ದೂರುದಾರರದು ಶಿಗ್ಗಾಂವಿಯಲ್ಲಿ ದವಸ ಧಾನ್ಯ ಮಾರಾಟ ಮಾಡುವ ಅಂಗಡಿ ಇತ್ತು, ಅಲ್ಲಿಗೆ ನಾನು ದವಸ ಧಾನ್ಯ ರೈತರಿಂದ ಪಡೆದುಕೊಂಡು ಅವರಿಗೆ ನೀಡುತ್ತಿದ್ದೆನು ಎಂದರೆ ಸರಿಯಲ್ಲ.

3. ದೂರುದಾರರು ಮತ್ತು ನಾನು ಸಾಕಷ್ಟು ಪರಿಚಯ ಹೊಂದಿದ್ದೆವು ಎಂದರೆ ಸರಿ. ಆದ್ದರಿಂದ ನನ್ನ ಮನೆಯ ಅಡಚಣೆಯ ಸಲುವಾಗಿ ನಾನು ದೂರುದಾರರಲ್ಲಿ ರೂ.90 ಸಾವಿರ ಹಣ ಬೇಡಿದ್ದರಿಂದ ಅವರು ನನಗೆ ದಿನಾಂಕ 01-03-2021 ರಂದು ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಹಣವನ್ನು 2

ತಿಂಗಳೊಳಗಾಗಿ ನೀಡುವುದಾಗಿ ದೂರುದಾರರಿಗೆ ಹೇಳಿದ್ದೆನು ಎಂದರೆ ಸರಿಯಲ್ಲ. ಹಾಗೇ 2 ತಿಂಗಳು ಕಳೆದ ನಂತರವೂ ನಾನು ದೂರುದಾರರಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ ದೂರುದಾರರು ನನಗೆ ಹಣ ಕೇಳಿದಾಗ ನಾನು ಅವರಿಗೆ ಚೆಕ್ಕು ನಿಪಿ–1 ನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಸಹ ನಾನು ದೂರುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಚೆಕ್ಕನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ಕು ಅಮಾನ್ಯವಾಗಿರುತ್ತದೆ ಎಂದರೆ ಸರಿಯಲ್ಲ. ಆಗ ದೂರುದಾರರು ಸದರಿ ವಿಷಯವನ್ನು ನನ್ನ ಗಮನಕ್ಕೆ ತಂದಿರುತ್ತಾರೆ ಎಂದರೆ ಸರಿಯಲ್ಲ. ಆದರೂ ಸಹ ನಾನು ಚೆಕ್ಕಿನಲ್ಲಿ ನಮೂದಿಸಿದ ಹಣ ದೂರುದಾರರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ ದೂರುದಾರರು ಹಣದ ಬೇಡಿಕೆ ನೋಟೀಸನ್ನು ನೀಡಿದ್ದರೂ ಸಹ ನಾನು ಅವರಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಬೇಡಿಕೆ ನೋಟೀಸಿಗೆ ನಾನು ಯಾವುದೇ ಉತ್ತರ ಕೊಟ್ಟಿಲ್ಲ ಎಂದರೆ ಸರಿ. ಆದರೂ ಸಹ ನಾನು ದೂರುದಾರರನ್ನು ಬೇಟಿಯಾಗಿಲ್ಲ, ಅವರಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಬೇಡಿಕೆ ನೋಟೀಸನ್ನು ನನಗೆ ಮಾತ್ರ ನೀಡಲಾಗಿತ್ತು ಬೇರೆಯವರಿಗೆ ಅಲ್ಲ ಎಂದರೆ ಸರಿಯಲ್ಲ. ನಿಪಿ–1 ಚೆಕ್ಕು ನನ್ನ ಖಾತೆಗೆ ಸಂಬಂಧಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ನಿಪಿ–1 ಚೆಕ್ಕನ್ನು ನನಗೆ ನನ್ನ ಖಾತೆ ಸಂಖ್ಯೆ 12732200045414 ರ ಖಾತೆಗೆ ನೀಡಲಾಗಿತ್ತು ಎಂದರೆ ಸರಿಯಲ್ಲ. ನಾನು ನಿಪಿ–1 ಚೆಕ್ಕಿಗೆ ನನ್ನ ಸಹಿ ಮಾಡಿ ಅದರಲ್ಲಿ ಹಣ ನಮೂದಿಸಿ ದೂರುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದೂರುದಾರರ ಮೇಲೆ ಸಾಕಷ್ಟು ಪ್ರಕರಣಗಳು ಇರುವುದಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.